**ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಸೊಂಪುರ ಕೈಗಾರಿಕ ಪ್ರದೇಶ (ದಾಬಸ್ ಪೇಟೆ ) ಅಶಾ ಸ್ವೀಟ್ ಕಾರ್ಖಾನೆಯ ಎಸ್ ಟಿ ಪಿ (ಮಲದ ಗುಂಡಿ) ಸಾವಿನ ವರದಿ**

ಕೆ.ಬಿ.ಓಬಳೇಶ, ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ ರಾಜ್ಯ ಸಂಚಾಲಕರು ಹಾಗೂ ಸದಸ್ಯರು, ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ರಾಜ್ಯ ಮೇಲ್ವಿಚಾರಣ ಸಮಿತಿ – ಪಿ ಇ ಎಂ ಎಸ್ ಅರ್ ಕಾಯ್ದೆ 2013, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ, ತುಮಕೂರು ಜಿಲ್ಲಾ ಸಮಿತಿ ಸದಸ್ಯರಾದ ಸಿದ್ದಗಂಗಯ್ಯ, ಯಮನೂರಪ್ಪ, ರಾಮಕೃಷ್ಣ , ಅಕ್ಷಯ್ ಕುಮಾರ್ , ಸ್ಥಳ ಪರಿಶೀಲಿಸಿ ಹಾಗೂ ಎರಡು ಕುಟುಂಬಸ್ಥರೊಂದಿಗೆ ಖುದ್ದು ಬೇಟಿ ಮಾಡಿ ಸಿದ್ದಪಡಿಸಿರುವ ಸಂಕ್ಷಿಪ್ತ ವರದಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಸೊಂಪುರ ಕೈಗಾರಿಕ ಪ್ರದೇಶ (ದಾಬಸ್ ಪೇಟೆ ) ಅಶಾ ಸ್ವೀಟ್ ಕಾರ್ಖಾನೆಯ ಎಸ್ ಟಿ ಪಿ (ಮಲದ ಗುಂಡಿ) ಸಾವಿನ ವರದಿ



**ಲಿಂಗರಾಜು**



**ನವೀನ್**

**ಘಟನೆ ವಿವರ:**
ದಿನಾಂಕ 31.10.24 ರಂದು ಸಾಯಂಕಾಲ ಸುಮರು **೬.೩೦** ನಿಮಿಷಕ್ಕೆ ದಾಬಸ್ಪೇಟೆ ಬಳಿಯ ಕೈಗಾರಿಕ ಪ್ರದೇಶದ ಆಶಾ ಸ್ವೀಟ್ ಕಾರ್ಖಾನೆಯಲ್ಲಿ ಎಸ್ ಟಿ ಪಿ ( ಮಲದ ಗುಂಡಿ ) ಸ್ವಚ್ಚ ಮಾಡಿಸಲು ಇಬ್ಬರು ಕಾರ್ಮಿಕರನ್ನು ಯಾವುದೇ ಸುರಕ್ಷಿತ ಸಲಕರಣೆಗಳಿಲ್ಲದೆ ಮಲದ ಗುಂಡಿ ಸ್ವಚ್ಚಗೊಳಿಸಲು ಇಳಿಸಿದ್ದು, ಮಲದ ವಿಷಾನಿಲ ಕುಡಿದು ಇಬ್ಬರು ಉಸಿರುಗಟ್ಟಿ ಸ್ಥಳದಲ್ಲಿಯೇ ಸತ್ತಿದ್ದಾರೆ. ಆ ಕೂಡಲೆ ಜೊತೆಯಲ್ಲಿ ಕೆಲಸ ಮಾಡುವ ಇತರೆ ಕಾರ್ಮಿಕರು ಮತ್ತು ಎಸ್ ಟಿ ಪಿ ನಿರ್ವಹಣೆ ಮಾಡುವ ಗುತ್ತಿಗೆ ಕಂಪನಿಯವರು ಪೋಲಿಸರಿಗೆ ತಿಳಿಸಿದ್ದು ಕೂಡಲೇ ಪೋಲಿಸ್ ಮತ್ತು ಇತರೇ ವ್ಯವಸ್ಥೆ ಮಾಡಿ ಹೆಣಗಳನ್ನು ಹೊರತೆಗೆದು ನೆಲಮಂಗಲ ಸರ್ಕಾರಿ ಅಸ್ಪತ್ರೆಗೆ ಸಾಗಿಸಿದ್ದಾರೆ.

ಸತ್ತಿರುವ ಈ ಇಬ್ಬರು ಕಾರ್ಮಿಕರು ಕಾಡುಗೊಲ್ಲ ಸಮುದಾಯಕ್ಕೆ ಸೇರಿದವರಗಿದ್ದಾರೆ, 1) ಲಿಂಗರಾಜು (26 ವರ್ಷ ) ಮಧುಗಿರಿ ತಾಲ್ಲೂಕು, ಗಾಂಜಾಲಗುಂಟೆ ಗ್ರಾಮದವರು ಬೆಲ್ಲದಮಡುಗು 2) ನವೀನ್ (26 ವರ್ಷ) ಇವರು ಅಂದ್ರು ಪ್ರದೇಶದ ಮಡಕಶಿರ ತಾಲ್ಲೂಕು, ಚಂದ್ರುಭಾವಿ ಅತ್ತಿರ ಜಾಕ್ಕೆನಹಳ್ಳಿಯವರು, ಘಟನೆ ಕುರಿತು ಈಗಾಗಲೇ ನೆಲಮಂಗಲ ಉಪ ವಿಭಾಗ ಪೋಲೀಸ್

ಠಾಣೆ ಯಲ್ಲಿ ಮಲಹೊರುವ ಪದ್ಧತಿ ನಿಷೇದ ಕಾಯ್ದೆ 2013 ಸೆಕ್ಷನ್ **7** ಮತ್ತು **9** ರ ಅಡಿ ಹಾಗೂ ಭಾರತೀಯ ನ್ಯಾಯ ಸಂಹಿತೆ 2023 ಸೆಕ್ಷನ್ **105** ರ ಅಡಿ **FIR ಸಂ: 0262/2024** ದಾಖಲಾಗಿದೆ.

ಅದೇ ದಿನ ನೆಲಮಂಗಲ ಉಪ ವಿಭಾಗ ಪೊಲೀಸ್ ಠಾಣೆ ಯಲ್ಲಿ ಕಾಡು ಗೊಲ್ಲ ಸಮುದಾಯದ ಕೆಲವು ಮುಖಂಡರು ಮತ್ತು ಪೊಲೀಸರು, ಹಾಗೂ ಅಶಾ ಸ್ವೀಟ್ ಕಾರ್ಖಾನೆಯ ಪರವಾಗಿ ವಕೀಲರು ಸೇರಿ ನ್ಯಾಯ ತೀರ್ಮಾನ ಮಾಡಿ ಸತ್ತ ಕುಟುಂಬಗಳಿಗೆ ತಲಾ ರೂ **15** ಲಕ್ಷ ಕೊಡಲು ಕಂಪನಿಯವರು ಒಪ್ಪಿದ್ದಾರೆ, ( ಅಶಾ ಸ್ವೀಟ್ ಕಾರ್ಖಾನೆಯವರು ತಲಾ **ರೂ.10 .00 ಲಕ್ಷ**, ಎಸ್ ಟಿ ಪಿ ನಿರ್ವಹಣೆ ಮಾಡುವ ಗುತ್ತಿಗೆದಾರ ತಲಾ **ರೂ.5.00ಲಕ್ಷ** )
ಅದರಂತೆ ಅಶಾ ಸ್ವೀಟ್ ಕಾರ್ಖಾನೆಯವರು ವಕೀಲರ ಮೂಲಕ ತಲಾ ರೂ **10.00** ಲಕ್ಷ ಚೆಕ್ ನ್ನೂ ವಕೀಲರ ಕಡೆ ಕೊಡಲಾಗಿದೆ, ಈ ರಾಜಿ ಸಂಧಾನದಂತೆ ಮೃತ ದೇಹಗಳನ್ನು ಸಹ ಅಂತ್ಯ ಕ್ರಿಯೆ ನಡೆಸಲಾಗಿದೆ. ಈ ಘಟನೆ ಕುರಿತು **ದಿನಾಂಕ 01.11.24** ರಂದು **new India express** ಪತ್ರಿಕೆಯಲ್ಲಿ ಸುದ್ದಿಯಾಗಿದೆ. ಅಂದಿನ ಕೆಲ ಸುದ್ದಿ ಮಾದ್ಯಮಗಳಲ್ಲಿ ಪ್ರಸಾರವಾಗಿದೆ,

**ಸತ್ತಿರುವ ಕುಟುಂಬಗಳ ವಿವರ:**

**೧) ಲಿಂಗರಾಜು 26 ವರ್ಷ**, ಮಧುಗಿರಿ ತಾಲ್ಲೂಕು, ಗಜ್ಜಲಗುಂಟೆ ಗ್ರಾಮದವರು, ಇವರು ಪದವಿ ವರೆಗೂ ವ್ಯಾಸಂಗ ಮಾಡಿದ್ದು, ಮಧುಗಿರಿ ತಾಲ್ಲುಕಿನ ಡಿ ವಿ ಹಳ್ಳಿ ಪಂಚಾತಿ ವ್ಯಾಪ್ತಿಯ ಬೆಲ್ಲದಮಡುಗು ಗ್ರಾಮದ ಕಾವ್ಯ ಅವರನ್ನು ಪರಸ್ಪರ ಪ್ರೀತಿಸಿ ಮದುವೆಯಾಗಿದ್ದಾರೆ, ಸುಮಾರು **2-3** ವರ್ಷಗಳ ಕಾಲ ಜೊತೆಯಲ್ಲಿ ಸಂಸಾರ ನಡೆಸುತ್ತಿದ್ದವರು, ಯಾವುದೊ ಸಣ್ಣ ಸಮಸ್ಯೆಗಳಲ್ಲಿ ಇಬ್ಬರಲ್ಲಿಯೂ ವೈಮನಸ್ಸು ಉಂಟಾಗಿ ಕಳೆದ **2** ವರ್ಷಗಳಿಂದ ಪ್ರತ್ತೇಕವಾಗಿದ್ದಾರೆ, ಇತ್ತಿಚ್ಚಿಗೆ ಹಿರಿಯರ ಮನಹೋಲಿಕೆಯಿಂದ ಜೊತೆಗೂಡಿ ಬದುಕಲು ನಿರ್ಧಾರಿಸದ್ದರು, ಶೀಘ್ರದಲ್ಲಿಯೇ ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಜೀವಿಸಲು ಯೋಜಿಸಿದ್ದರು ಎಂದು ಕುಟುಂಬಸ್ತರು ತಿಳಿಸಿದರು,

**ಪರಿಹಾರ ವಿವರ:** ಶಿವಕುಮರ್ , ವಕೀಲರು ಇವರು ವಿವರಿಸಿದಂತೆ ಅಶಾ ಸ್ವೀಟ್ ಕಂಪನಿಯವರು ಕೊಟ್ಟಿರುವ **ರೂ.10.00** ಲಕ್ಷಗಳಲ್ಲಿ ಲಿಂಗರಾಜು ಪತ್ನಿ ಕಾವ್ಯ ಮತ್ತು ಅವರ ಅತ್ತೆ ಸೇರಿ **ರೂ.5.00** ಲಕ್ಷ, ಜಂಟಿ ಚೆಕ್ ನೀಡಲಾಗಿದೆ, ಲಿಂಗರಾಜು ತಂದೆ ಕಡೆಯವರಿಗೆ **ರೂ.5.00** ಲಕ್ಷ ದಂತೆ ಹಂಚಿಕೊಂಡಿದ್ದಾರೆ.

**೨) ನವೀನ್ 26 ವರ್ಷ**. ಅಂದ್ರಪ್ರದೇಶ ದ ಮಡಕಶಿರ ತಾಲ್ಲುಕು ಜಕ್ಕೇನಹಳ್ಳಿ ( ಜಕ್ಕೆ ಪಲ್ಲಿ) ಯವರು ಇವರಿಗು ಮದುವೆಯಾಗಿ **5** ವರ್ಷ ಹೆಣ್ಣು ಮಗುವಿದೆ . ಇವರ ಪತ್ನಿ ಮಣಿ ಎಂಬುವರು ಕಳೆದ 2 ವರ್ಷಗಳಿಂದ ನವೀನ್ ಜೊತೆ ಇರುವುದಿಲ್ಲ, ಪ್ರತ್ತೇಕವಾಗಿದ್ದಾರೆ ಎಂದು ಕುಟುಂಬಸ್ಥರು ವಿವರಿಸಿದರು,

**ಪರಿಹಾರ ವಿವರ**: ನವೀನ್ ಪತ್ನಿ ಮಣಿ ಯವರು ಅಶಾ ಸ್ವೀಟ್ಸ್ ನವರು ಕೊಟ್ಟಿರುವ **ರೂ.10.00** ಲಕ್ಷ ಹಣವನ್ನು ಪೂರ್ತಿ ಅವರೆ ತೆಗೆದುಕೊಂಡಿದ್ದಾರೆ, ವಯಸ್ಸದ ತಂದೆ-ತಾಯಿಯರಿಗೆ ಏನು ಪರಿಹಾರ ಸಿಕ್ಕಿಲ್ಲ,

ಈ ಎಲ್ಲಾ ರಾಜಿ ಸಂದಾನವನ್ನ ವಕೀಲರಾದ ಶಿವಕುಮಾರ್ ರವರು ಮತ್ತು ನೆಲಮಂಗಲ ಪೋಲಿಸ್ ಠಾಣೆಯವರು ಮತ್ತು ಕಂಪನಿ ವಕೀಲರು ಹಾಗೂ ಇತರೆ ಮುಖಂಡರು ಸೇರಿ ಮಾಡಿದ್ದಾರೆ.

**ನಮ್ಮ ತಂಡ ಗಮನಿಸಿದ್ದು:**

- ಅಶಾ ಸ್ವೀಟ್ ಕಾರ್ಖಾನೆಯಲ್ಲಿ ಸುಮಾರು 400 ಕಾರ್ಮಿಕರು ಕೆಲಸ ಮಾಡುತ್ತಾ ಅವರು ಬಳಸುವ ಶೌಚಾಲಯಗಳಿಂದ ಬರುವ ಮಲ-ಮೂತ್ರ, ಮತ್ತು ಕಾರ್ಖಾನೆಯ ಮಾಲಿನ್ಯ ನೀರು ಸಂಸ್ಕರಣೆ ಮಾಡಲು ನಿರ್ಮಿಸಿರುವ ಎಸ್ ಟಿ ಪಿ ಯಲ್ಲಿ ಇಬ್ಬರು ಕಾರ್ಮಿಕರನ್ನು ಯಾವುದೇ ಸುರಕ್ಷಿತ ಸಲಕರಣೆಗಳು ಮತ್ತು ಅರಿವು ಮೂಡಿಸದೆ ಗುತ್ತಿಗೆದಾರ ಸ್ವಚ್ಚ ಮಾಡಲು ಇಳಿಸಿದ್ದಾರೆ,

- ಇಬ್ಬರು ಬಡ ಕೂಲಿ ಕಾರ್ಮಿಕರು ಉಸಿರುಗಟ್ಟಿ ಸತ್ತಿದ್ದರು ಯಾವುದೇ ರೀತಿಯ ಅನುಕಂಪವಿಲ್ಲದೆ ಕೇವಲ ಸಣ್ಣ ಪರಿಹಾರ ಕೊಡಲು ಪೋಲಿಸರನ್ನು ಮತ್ತು ಸತ್ತ ಕಾರ್ಮಿಕರ ಸಮುದಾಯದ ಮುಖಂಡರನ್ನು ಬಳಸಿಕೊಂಡು ರಾಜಿ ಮಾಡಿ ಶವಗಳನ್ನು ವಿಲೇವರಿ ಮಾಡಿದ್ದಾರೆ.

- ಸತ್ತಿರುವ ಎರಡು ಕುಟುಂಬಗಳು ಬಡವರು, ಅನಕ್ಷರಸ್ಥರು, ಜೊತೆ **ಕಾಡು ಗೊಲ್ಲ ಸಮುದಾಯದವರು ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಇಂದಿಗೂ ಕಾಡು ಗೊಲ್ಲ ಸಮುದಾಯದವರು ಅತಿಯಾದ ಮೌಢ್ಯ, ಮುಡನಂಬಿಕೆಗಳನ್ನು ಅನುಸರಿಸುತ್ತಿರುವವರು,** ಇಂತಹ ಸಮುದಾಯದ ಪಧವಿ ವರೆಗೂ ವಿದ್ಯಾಭ್ಯಾಸ ಮಾಡಿರುವ ಯುವಕರನ್ನು ಎಸ್ ಟಿ ಪಿ ಗೆ ಇಳಿಸಿ ಕೊಲೆ ಮಾಡಲಾಗಿದೆ.

- ಪೋಲಿಸ್ ಠಾಣೆಯಲ್ಲಿ ಪೋಲಿಸರ ಸಮ್ಮುಖದಲ್ಲಿ ಪರಿಹಾರ ಎಷ್ಟು ಕೋಡಬೇಕು ಎಂಬ ನ್ಯಾಯ ತಿರ್ಮಾನ ಮಾಡಿರುವುದು ಸಂಪೂರ್ಣವಾಗಿ ಕಾನೂನು ಬಾಹೀರ

**ಶಿಫಾರಸ್ಸುಗಳು:**

- ಈಗಾಗಲೇ ಎಫ್ ಐ ಅರ್ ದಾಖಲಿಸಿರುವಂತೆ ಇದು ಉದ್ದೇಶ ಪೂರ್ವಕವಾಗಿ ಕಾನೂನು ಬಾಹಿರವಾಗಿ ಮಾಡಿರುವ ಕೊಲೆಗಳು
- ಪಿ ಇ ಎಂ ಎಸ್ ಅರ್ ಕಾಯ್ದೆ 2013 ಮತ್ತು ಭಾ.ನಿ.ಸಂ ಕಾಯ್ದೆ 2023 ಸೆಕ್ಷನ್ 105 ರ ಅಡಿಯಲ್ಲಿ ತಕ್ಷಣ ಅಶಾ ಸ್ವೀಟ್ ಕಾರ್ಖಾನೆ ಮಾಲಿಕರು ಮತ್ತು ಎಸ್ ಟಿ ಪಿ ಸ್ವಚ್ಚತಾ ಗುತ್ತಿಗೆದಾರರನ್ನು ಬಂಧಿಸಬೇಕು.

- ನೆಲಮಂಗಲ ಉಪ ವಿಭಾಗದ ಪೋಲಿಸರು ಅಶಾ ಸ್ವೀಟ್ ಕಾರ್ಖಾನೆ ಮಾಲಿಕರು ಮತ್ತು ಆವರ ವಕೀಲರನ್ನು ಬಳಸಿಕೊಂಡು ಕಾನೂನು ವಿರುದ್ದವಾಗಿ ರಾಜಿ ಸಂದಾನ ಮಾಡಿದ್ದಾರೆ, ಸಂಭಂದಿಸಿದ ಪೋಲಿಸರು ಪಿ ಇ ಎಂ ಎಸ್ ಅರ್ ಕಾಯ್ದೆ 2013 ಸೆಕ್ಷನ್ 7 ಮತ್ತು 9 ನ್ನು ಉಲ್ಲಂಗಿಸಿದ್ದಾರೆ, ಇವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕು.

- ಪಿ ಇ ಎಂ ಎಸ್ ಅರ್ ಕಾಯ್ದೆ ಸೆಕ್ಷನ್ ೧೩ ರ ಅಡಿ ೨೦೨೩ ಸುಪ್ರಿಂ ಕೋರ್ಟ್ ಅದೇಶದಂತೆ ಮರಣಹೊಂದಿರುವ ಲಿಂಗರಾಜು ಮತ್ತು ನವೀನ್ ರವರ ಪತ್ನಿಯರಿಗೆ ಮೂಲಭೂತವಾಗಿ ಪುನರ್ವಸತಿ ಮತ್ತು ಪರಿಹಾರ ದೊರೆಯಬೇಕು,

- ಕರ್ನಾಟಕ ರಾಜ್ಯ ಸಫಾಯಿಕರ್ಮಚಾರಿಗಳ ಅಯೋಗ ಅಧಿಕೃತವಾಗಿ ದೂರು ದಾಖಲಿಸಿಕೊಂಡು ತಪ್ಪುತಸ್ಥರಿಗೆ ಕಾನೂನಾತ್ಮಕವಾಗಿ ಶಿಕ್ಷೆ ಕೊಡಿಸಬೇಕು ಹಾಗೂ

- ಮರಣಹೊಂದಿರುವ ಲಿಂಗರಾಜು ಮತ್ತು ನವೀನ್ ರವರ ಪತ್ನಿಯರಿಗೆ ಸರ್ಕಾರ ಉದ್ಯೋಗ, ವಸತಿ, ನೀಡಿ ಸಮಗ್ರವಾದ ಪುನರ್ವಸತಿ ಮಾಡಬೇಕು.

- ನೆಲಮಂಗಲ ಸುತ್ತ ಮುತ್ತ ದಾಬಾಸ್ ಪೇಟೆ ಕೈಗಾರಿಕ ಪ್ರದೇಶಗಳಲ್ಲಿ ಅನೇಕ ಎಸ್ ಟಿ ಪಿ ಗಳಿವೆ, ಈ ಎಲ್ಲಾ ಎಸ್ ಟಿ ಪಿ ಗಳ ಮುಂದೆ ಎಚ್ಚರಿಕೆ ಮತ್ತು ಜಾಗೃತಿ ಪಲಕಗಳನ್ನು ಹಾಕಬೇಕು,

- ಕೈಗಾರಿಕಾ ಪ್ರದೇಶಗಳಲ್ಲಿ ವಿವಿಧ ರೀತಿಯ ಎಸ್ ಟಿ ಪಿಗಳಿವೆ, ಇವುಗಳನ್ನು ನಿರ್ಮಾಣ ಮತ್ತು ನಿರ್ವಾಹಣೆ ಮಾಡುವ ಕಂಪನಿಗಳಿವೆ, ಇವುಗಳನ್ನು ನಿರ್ವಾಹಣೆ ಮಾಡುವ ಕ್ರಮಗಳ ಕುರಿತು ಕೈಗಾರಿಕಾ ಪ್ರದೇಶ ( ಕೆ ಐ ಡಿ ಬಿ ) ಅಧಿಕಾರಿಗಳ ಸಭೆ ಶೀಘ್ರದಲ್ಲಿ ಕರೆದು ಚರ್ಚಿಸಿ ಸೂಕ್ತ ನಿಯಮವಳಿಗಳನ್ನು ರಚಿಸಬೇಕು , ಪ್ರತಿ ಎಸ್ ಟಿ ಪಿ ಗಳ ಮುಂದೆ ಎಚ್ಚರಿಕೆ ನಾಮಪಲಕಗಳನ್ನು ತಕ್ಷಣದಿಂದಲೇ ಹಾಕಬೇಕು ಎಂದು ನಿರ್ಧೇಶನ ನೀಡಬೇಕು.

**ಕೆ.ಬಿ.ಓಬಳೇಶ,**
ರಾಜ್ಯ ಸಂಚಾಲಕರು
ಸಫಾಯಿಕರ್ಮಚಾರಿ ಕಾವಲು ಸಮಿತಿ-ಕರ್ನಾಟಕ

**ಜಿಲ್ಲಾ ಸಮಿತಿ ಸದಸ್ಯರುಗಳು**

ಸಿದ್ದಗಂಗಯ್ಯ, ಯಮನೂರಪ್ಪ, ರಾಮಕೃಷ್ಣ , ಅಕ್ಷಯ್ ಕುಮಾರ್